ಮುಂದೆ ಹಿಂದುತ್ವದ ಅಗ್ನಿಯಲ್ಲಿ ಎಲ್ಲಾ ರಾಷ್ಟ್ರದ್ರೋಹಿ ಹಾಗೂ ಧರ್ಮದ್ರೋಹಿಗಳ ಆಹುತಿಯಾಗುವುದು ಅನಂತರ ಈಶ್ವರೀ ರಾಜ್ಯದ ಸ್ಥಾಪನೆ ಆದ ಮೇಲೆಯೇ ಆ ಅಗ್ನಿಯು ಶಾಂತವಾಗುವುದು !

Licensed to Post under WPP No. WPP/SK-45/2009-11Regd. No. MNG/429/2009-11 Posted every Saturday at Kodialbail Post Office, Mangalore - 575003 and Head Post Office, Udupi - 576101

ಸಂಪುಟ 10 ಸಂಚಿಕೆ 52
8 ರಿಂದ 14 ಜನವರಿ 2009





ದುರ್ಜನರ ನಾಶಕ್ಕಾಗಿ ಸಾಪ್ತಾಹಿಕ


# ಸನಾತನ ಪ್ರಭಾತ

## ಹಿಂದೂ ಧರ್ಮಜಾಗೃತಿ ಸಭೆ ವಿಶೇಷಾಂಕ


ಜಾತ್ಯತೀತವಾದಿಗಳಿಂದ ಭಾರತದ ತುಂಡುಗಳಾಗುವುದನ್ನು ತಡೆಗಟ್ಟುವುದಕ್ಕಾಗಿ, ಅಂದರೆ ಹಿಂದೂ ಧರ್ಮದ, ಅಂದರೆ ಸ್ವಂತದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಈಗ ಹಿಂದೂ ರಾಷ್ಟ್ರದ ನಿರ್ಮಿತಿಯು ಅನಿವಾರ್ಯ !

ಬೆಲೆ ರೂ. 4
ಪುಷ್ಯ ಶುಕ್ಲ ೧೨ ರಿಂದ ಕೃಷ್ಣ ೪
ಕಲಿಯುಗ ವರ್ಷ ೫೧೧೦

If Undelivered Please Return To : Saptahik Sanatan Prabhat, D.No. 22-18, Chitrapu Village, Mulki - 574 154. (D.K.)


## ಹುಬ್ಬಳ್ಳಿಯಲ್ಲಿ ಜರುಗಿದ ಹಿಂದೂ ಧರ್ಮಜಾಗೃತಿ ಸಭೆ

### ೩೦೦೦ ಕ್ಕೂ ಹೆಚ್ಚು ಹಿಂದೂ ಧರ್ಮಾಭಿಮಾನಿಗಳ ಉಪಸ್ಥಿತಿ



ದೀಪಪ್ರಜ್ವಲನೆ ಮಾಡುತ್ತಿರುವ ಶ್ರೀ. ರಾಘವೇಂದ್ರ ಆಚಾರ್ಯ, ಎಡದಿಂದ ಶ್ರೀ. ಮೋಹನ ಗೌಡ, ಶ್ರೀ. ವಿನೋದ ಕಾಮತ, ಶ್ರೀ. ಗಿರೀಶ ಮಟ್ಟೆಣ್ಣನವರ ಹಾಗೂ ಶ್ರೀ. ಕುಬೇರಗೌಡ ಕಲ್ಲನಗೌಡರ

**ಹುಬ್ಬಳ್ಳಿ :** ದಿನಾಂಕ ೨೮.೧೨.೨೦೦೮ ರಂದು ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಸಾಯಂಕಾಲ ೫.೦೦ ಗಂಟೆಯಿಂದ ಹಿಂದೂ ಧರ್ಮಜಾಗೃತಿ ಸಭೆಯು ನೆರವೇರಿತು. ಈ ಸಭೆಯಲ್ಲಿ ಸುಮಾರು ೩೦೦೦ ಕ್ಕೂ ಹೆಚ್ಚು ಧರ್ಮಾಭಿಮಾನಿಗಳು ಪಾಲ್ಗೊಂಡು ಸಭೆಯ ಲಾಭವನ್ನು ಪಡೆದುಕೊಂಡರು.

ಈ ಸಭೆಯಲ್ಲಿ ಶ್ರೀ. ರಾಘವೇಂದ್ರ ಆಚಾರ್ಯ (ಗೌರವಾಧ್ಯಕ್ಷರು, ವಿಶ್ವ ಹಿಂದೂ ಪರಿಷತ್ತು, ಉಡುಪಿ ಜಿಲ್ಲೆ), ಶ್ರೀ. ಗಿರೀಶ ಮಟ್ಟೆಣ್ಣನವರ (ಬಿಜೆಪಿ ಯುವಮೋರ್ಚಾದ ರಾಜ್ಯಾಧ್ಯಕ್ಷರು), ಶ್ರೀ. ಕುಬೇರಗೌಡ ಕಲ್ಲನಗೌಡರ (ಧರ್ಮಶಕ್ತಿ ಸೇನೆ), ಶ್ರೀ. ವಿನೋದ ಕಾಮತ (ಸನಾತನ ಸಂಸ್ಥೆ), ಶ್ರೀ. ಮೋಹನ ಗೌಡ (ಹಿಂದೂ ಜನಜಾಗೃತಿ ಸಮಿತಿ) ಇವರು ಉಪಸ್ಥಿತರಿದ್ದರು. ಸಭೆಯನ್ನು ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯ ಶ್ರೀ. ನಾರಾಯಣಭಟ್ ಜೋಶಿ ಮತ್ತು ಸಂಗಡಿಗರ ವೇದಮಂತ್ರಪಠಣದಿಂದ ಆರಂಭಿಸಲಾಯಿತು.

ನಂತರ ಶ್ರೀ. ರಾಘವೇಂದ್ರ ಆಚಾರ್ಯರವರ ಹಸ್ತದಿಂದ ದೀಪ ಪ್ರಜ್ವಲನೆಯನ್ನು ಮಾಡಲಾಯಿತು. ಶ್ರೀ. ರಾಘವೇಂದ್ರ ಆಚಾರ್ಯರವರ ಸತ್ಕಾರವನ್ನು ಸಮಿತಿಯ ಶ್ರೀ. ಅರವಿಂದ ಕಾಮತರವರು ಮಾಡಿದರು. ಹಿಂದೂ ಜನಜಾಗೃತಿ ಸಮಿತಿಯ ಕಾರ್ಯದ ವರದಿಯನ್ನು ಸಮಿತಿಯ ಸೌ. ವಿದುಲಾ ಹಳದೀಪುರರವರು ಮಂಡಿಸಿದರು. ಕನ್ನಡ 'ಸಾಪ್ತಾಹಿಕ ಸನಾತನ ಪ್ರಭಾತ'ದ ಪ್ರತಿನಿಧಿ ಸೌ. ರೋಹಿಣಿ ದೇಶಪಾಂಡೆಯವರು 'ಸನಾತನ ಪ್ರಭಾತ'ದ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿದರು ಮತ್ತು ಎಸ್.ಎಸ್.ಆರ್.ಎಫ್.ನ ಪರಿಚಯವನ್ನು ಶ್ರೀ. ವೈಭವ ಮಣಗಾಂವಕರರವರು ಮಾಡಿದರು. ಈ ಸಭೆಯ ಸೂತ್ರಸಂಚಲನೆಯನ್ನು ಸೌ. ಮೀರಾ ಕರಿ ಮತ್ತು ಶ್ರೀ. ಸ್ವಯಂಪ್ರಕಾಶರವರು ಮಾಡಿದರು.

#### ವಕ್ತಾರರ ಭಾಷಣಗಳು

#### ಹಿಂದುತ್ವಕ್ಕಾಗಿ ರಾಜ್ಯ ಮಾಡುವ ರಾಜಕಾರಣಿಗಳು ಬೇಕು ! - ಶ್ರೀ. ರಾಘವೇಂದ್ರ, ಆಚಾರ್ಯ

ಹಿಂದೂಗಳನ್ನು ಕೊಲ್ಲುವುದು, ಬಾಂಗ್ಲಾದೇಶೀ ಅತಿಕ್ರಮಣಕಾರರ ಮೂಲಕ ಮತ್ತು ಮತಾಂತರದ ಮೂಲಕ ಇತರ ಪಂಥೀಯರು ಹಿಂದೂ ಧರ್ಮದ ಮೇಲೆ ಹಲ್ಲೆಯನ್ನು ಮಾಡುತ್ತಿದ್ದಾರೆ. ಇಂದು ನಾವೇ ನಮ್ಮ ರಕ್ಷಣೆಯನ್ನು ಮಾಡಿಕೊಳ್ಳುವ ಸಮಯವು ಬಂದಿದೆ. ಹಿಂದುತ್ವಕ್ಕಾಗಿ ರಾಜ್ಯ ಮಾಡುವ ರಾಜಕಾರಣಿಗಳು ಬೇಕು. (೨ ನೇ ಪುಟಕ್ಕೆ)

## ಹಿಂದೂ ಧರ್ಮದ ಪುನರುತ್ಥಾನಕ್ಕಾಗಿ ! ಹಿಂದೂ ಧರ್ಮಜಾಗೃತಿ ಸಭೆ

ತಮ್ಮ ಶ್ರದ್ಧಾಸ್ಥಾನಗಳ ವಿಡಂಬನೆ, ಧರ್ಮಬಾಂಧವರ ಮೇಲೆ ವಿವಿಧ ರೀತಿಯ ಉದ್ಧಟತನ, ಸ್ವಂತದ ನಿಷ್ಕ್ರಿಯತೆ, ಧರ್ಮಪಾಲನೆಯ ಅಭಾವ, ಸ್ವಂತದ ದೇಶದಲ್ಲಿ ಕವಡೆ ಬೆಲೆಯಿಲ್ಲದ, ಒಂದಲ್ಲ ಒಂದು ಸಂಘಟನೆಯಲ್ಲಿದ್ದರೂ ಯೋಗ್ಯ ದಿಕ್ಕು ಮತ್ತು ಮಾರ್ಗದರ್ಶನದ ಅಭಾವದಿಂದ ಅಂಧಃಕಾರದಲ್ಲಿರುವ ಹಿಂದೂಗಳಲ್ಲಿ ನವಚೈತನ್ಯವನ್ನು ಜಾಗೃತಗೊಳಿಸುವುದು ಹಿಂದೂ ಜನಜಾಗೃತಿ ಸಮಿತಿಯ ಮುಖ್ಯ ಉದ್ದೇಶವಾಗಿದೆ. ಈ ಪ್ರಯುಕ್ತ ಸಮಿತಿಯ ವತಿಯಿಂದ ದೇಶದಾದ್ಯಂತ 'ಹಿಂದೂ ಧರ್ಮಜಾಗೃತಿ ಸಭೆ'ಗಳನ್ನು ಆಯೋಜಿಸಲಾಗುತ್ತಿದೆ. ಹಿಂದೂ ಜನಜಾಗೃತಿ ಸಮಿತಿಯ ಈ ಧರ್ಮಸಭೆಯ ಉದ್ದೇಶಗಳನ್ನು ಸ್ವಲ್ಪದರಲ್ಲಿ ತಿಳಿದುಕೊಳ್ಳೋಣ.

- ವಿವಿಧ ಗುಂಪುಗಳಲ್ಲಿ ಕಾರ್ಯನಿರತವಾಗಿರುವ ಧರ್ಮಾಭಿಮಾನಿ ಹಿಂದೂಗಳನ್ನು ಹಿಂದೂ ಧರ್ಮದ ಧ್ವಜದಡಿಯಲ್ಲಿ ತರುವುದು !
- ಹಿಂದೂಗಳನ್ನು ಸ್ವಧರ್ಮದ ರಕ್ಷಣೆಗಾಗಿ ಕೃತಿಶೀಲರನ್ನಾಗಿಸುವುದು !
- ಚೈತನ್ಯಯುಕ್ತ ಮಾರ್ಗದರ್ಶನದಿಂದ ಸಮಾಜದ ಮೇಲೆ ಗಾಢ ಪರಿಣಾಮವಾಗುವುದು !
- ಧರ್ಮ ಮತ್ತು ರಾಷ್ಟ್ರಕ್ಕಾಗಿ ಏನಾದರೂ ಮಾಡಬೇಕು ಎನ್ನುವವರಿಗೆ ಮಾರ್ಗದರ್ಶನ ಮಾಡುವುದು !
- ಜಾಗೃತ ಹಿಂದೂಗಳನ್ನು ಅವರ ಕ್ಷಮತೆಗನುಸಾರ ಧರ್ಮದ ಮೇಲಾಗುವ ಆಘಾತಗಳನ್ನು ತಡೆಗಟ್ಟಲು ಕೃತಿಶೀಲರನ್ನಾಗಿಸುವುದು !
- ಹಿಂದೂ ಧರ್ಮದ ಮೇಲಾಗುತ್ತಿರುವ ಆಘಾತಗಳ ಕಡೆಗೆ ಸರಕಾರದ ಗಮನವನ್ನು ಸೆಳೆಯಲು ಒತ್ತಡ ತರುವುದು !


| | |
|---|---|
| ದಕ್ಷಿಣ ಭಾರತದಾದ್ಯಂತ ನಡೆಯಲಿರುವ ಹಿಂದೂ ಧರ್ಮಜಾಗೃತಿ ಸಭೆಯ ಮಾಹಿತಿಗಾಗಿ | ಓದಿರಿ ಪುಟ ೮ |


## ಹಿಂದೂಗಳೇ, ಈಗ ಧರ್ಮಹಿತಕ್ಕಾಗಿ ಕಾರ್ಯನಿರತರಾಗಿರಿ !



ಪ್ರಸ್ತುತ ದೇಶದಾದ್ಯಂತ ಅಶಾಂತಿ ಹರಡಿದೆ. ಜಿಹಾದಿ ಭಯೋತ್ಪಾದನೆ, ನಕ್ಸಲ್‌ವಾದ, ಭ್ರಷ್ಟಾಚಾರ ಮುಂತಾದ ಸಮಸ್ಯೆಗಳಿಂದ ರಾಷ್ಟ್ರಪುರುಷನು ಮರಣೋನ್ಮುಖನಾಗುತ್ತಿದ್ದಾನೆ. ಇದಕ್ಕೆ ವಿವಿಧ ಕಾರಣಗಳನ್ನು ಹೇಳಲಾಗುತ್ತದೆ. ಪರಿಹಾರೋಪಾಯಗಳನ್ನೂ ಮಾಡಲಾಗುತ್ತದೆ. 'ಕಟ್ಟುನಿಟ್ಟಾದ ರಕ್ಷಣಾ ವ್ಯವಸ್ಥೆಯನ್ನು ಮಾಡಲಾಗಿದೆ' ಎಂಬ ವಾಕ್ಯವು ಈಗ ಚಿಕ್ಕ ಮಕ್ಕಳಿಗೂ ಪರಿಚಿತವಾಗಿ ಬಿಟ್ಟಿದೆ. ವಾಸ್ತವದಲ್ಲಿ ಪರಿಸ್ಥಿತಿಯು ದಿನೇದಿನೇ ಹದಗೆಡುತ್ತಲೇ ಇದೆ. ಇದನ್ನೆಲ್ಲ ನೋಡುವಾಗ ಎಲ್ಲ ಪರಿಹಾರೋಪಾಯಗಳು ನಿಷ್ಪ್ರಯೋಜಕವಾಗಿವೆ ಎಂಬುದು ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಹಿಂದೂಗಳಿಗೆ ಹಿಂದೂ ಧರ್ಮದ ಬಗ್ಗೆ ಇರುವ ತಾತ್ಸಾರ ಮನೋಭಾವ. ಸನಾತನ ಹಿಂದೂ ಧರ್ಮವು ಭಾರತದ ಆತ್ಮವಾಗಿದೆ. ಹಿಂದೂ ಧರ್ಮದ ಮೇಲೆ ಮುಘಲರ ರಾಜ್ಯಾಡಳಿತದಲ್ಲಾದ ಹಾನಿಗಿಂತಲೂ ಹೆಚ್ಚಿನ ಹಾನಿಯು ಸ್ವಾತಂತ್ರ್ಯೋತ್ತರ ಕಾಲದಲ್ಲಾಗಿದೆ. ಈ ಹಾನಿಯ ಹಿಂದೆ ಸಾಮ್ಯವಾದಿ ವಿಚಾರಸರಣಿ, ಪಾಶ್ಚಾತ್ಯ ಆಚಾರವಿಚಾರಗಳ ಪ್ರಭಾವ, ರಾಜ್ಯಕರ್ತರು ಒಂದುಗಂಟಿನ ಓಟುಗಳಿಗಾಗಿ ಮಾಡುತ್ತಿರುವ ಕುಟಿಲ ರಾಜನೀತಿ, ಭಾರತದಲ್ಲಿ ಮತಾಂತರಕ್ಕಾಗಿ ವಿದೇಶಗಳಿಂದ ಹರಿದು ಬರುತ್ತಿರುವ ಆರ್ಥಿಕ ಸಂಪತ್ತು ಮುಂತಾದವುಗಳು ಬಾಹ್ಯ ಕಾರಣಗಳಾಗಿವೆ. ಹಾಗೆಯೇ ಆಂತರಿಕ ಕಾರಣಗಳಿಂದಲೂ ಹಾನಿಯಾಗುತ್ತಿದೆ. ಹಿಂದೂಗಳಲ್ಲಿರುವ ಧರ್ಮಶಿಕ್ಷಣದ ಅಭಾವವೇ ಈ ಹಾನಿಗೆ ಮುಖ್ಯವಾದ ಆಂತರಿಕ ಕಾರಣವಾಗಿದೆ. ಅವರಿಂದ ಧರ್ಮಾಚರಣೆಯ ಬಗೆಗಿನ ಅಕ್ಷಮ್ಯ ತಾತ್ಸಾರ, ಜಾಹೀರಾತು ಮತ್ತು ಮನೋರಂಜನಾತ್ಮಕ ಕಾರ್ಯಕ್ರಮಗಳ ಮಾಧ್ಯಮದಿಂದ ಸ್ವಧರ್ಮದ ಅಪಹಾಸ್ಯ, ಈ ಅಪಹಾಸ್ಯವನ್ನು ಸಹಿಸುವುದು ಮತ್ತು ಹಣ ನೀಡಿ ಪ್ರೋತ್ಸಾಹಿಸುವುದು ಇವೆಲ್ಲ ಸಾರಾಸಗಟಾಗಿ ನಡೆಯುತ್ತಲೇ ಇವೆ. ಈ ಸ್ಥಿತಿಯನ್ನು ಬದಲಾಯಿಸಲು ಅವಶ್ಯವಿರುವಂತಹ ಕೃತಿಗಾಗಿ ಬೆರಳೆಣಿಯಷ್ಟು ಜನರು ಮಾತ್ರ ಪ್ರಯತ್ನಿಸುತ್ತಿದ್ದಾರೆ. ಆದರೆ ಸ್ವತಃ ಹಿಂದೂಗಳೇ ಈ ಕಾರ್ಯವನ್ನು ಮಾಡುವವರನ್ನು ವಿರೋಧಿಸುತ್ತಾರೆ. ಸಕ್ರಿಯವಾಗಿ ಸಹಾಯ ಮಾಡುವವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇಂತಹವರ ಮೇಲೆ ಧರ್ಮವಿರೋಧಿ, ತಥಾಕಥಿತ ಜಾತ್ಯತೀತವಾದಿಗಳಿಂದ ಆಘಾತಗಳಾದಾಗ ಇತರ ಹಿಂದೂಗಳು ಆಘಾತ ಮಾಡುವವರಿಗೆ ಬೆಂಬಲ ನೀಡುವುದರಲ್ಲಿಯೇ ಧನ್ಯತೆಯನ್ನು ಕಾಣುತ್ತಿದ್ದಾರೆ. ಬಲಾಢ್ಯ ಪ್ರಸಾರ ಮಾಧ್ಯಮಗಳು ಹಿಂದೂ ಧರ್ಮವನ್ನು ನಾಶಗೊಳಿಸುವುದರಲ್ಲಿಯೇ ಮಗ್ನವಾಗಿದ್ದಾರೆ. ಕೆಲವೆಡೆ ಹಿಂದುತ್ವದ ಜೋಪಾಸನೆಗಾಗಿ ಪ್ರಯತ್ನಿಸುವವರನ್ನು ಹೆಕ್ಕಿ ಹೆಕ್ಕಿ ಕೊಲ್ಲಲಾಗುತ್ತಿದೆ. ಇನ್ನು ಕೆಲವು ಕಡೆಗಳಲ್ಲಿ ಕಾನೂನುಗಳನ್ನು ಜ್ಯಾರಿಗೊಳಿಸಿ ಈ ಧರ್ಮದ ಮೇಲೆ ಬಹಿರಂಗವಾಗಿ ಆಘಾತ ನಡೆಸುವ ಪ್ರಯತ್ನಗಳಾಗುತ್ತಿವೆ.

ಹಿಂದೂ ಧರ್ಮದ ವಿವಿಧ ಸಂಪ್ರದಾಯಗಳು, ಅವುಗಳನ್ನು ಮುನ್ನಡೆಸುವವರು, ಈ ಧರ್ಮದ ವಿವಿಧ ಸ್ಥಾನಗಳಲ್ಲಿರುವ ಧರ್ಮಗುರುಗಳು ಇವರಲ್ಲಿನ ಅನೇಕ ಜನರು ಕೇವಲ (೪ ನೇ ಪುಟಕ್ಕೆ)


| | | |
|---|---|---|
| ಮಕರ ಸಂಕ್ರಾಂತಿ ಜನವರಿ ೧೪ | ಒಳಗಿನ ಪುಟಗಳಲ್ಲಿ ಓದಿರಿ ! | 卐 ಮಕರ ಸಂಕ್ರಾಂತಿಯನ್ನು ಆಚರಿಸುವ ಯೋಗ್ಯ ಪದ್ಧತಿ ಯಾವುದು ?<br>卐 ಉಡಿ ತುಂಬುವ ಮತ್ತು ಬಾಗಿನವನ್ನು ಕೊಡುವುದರ ಹಿನ್ನೆಲೆಯ ಶಾಸ್ತ್ರವೇನು ?<br>卐 ಮಕರ ಸಂಕ್ರಾಂತಿಯ ಕಾಲವನ್ನು ಸಾಧನೆಗೆ ಪೂರಕವೆಂದು ಏಕೆ ಹೇಳಲಾಗುತ್ತದೆ ? |


## ಕುಣಿಗಲ್‌ನಲ್ಲಿ ಹಿಂದೂಗಳು ಸಂಘಟಿತರಾಗಲು ನಿರ್ಧಾರ !

**ಕುಣಿಗಲ್ :** ದಿನಾಂಕ ೨೫.೧೨.೨೦೦೮ ರಂದು ಇಲ್ಲಿನ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ಸಾಯಂಕಾಲ ೫.೦೦ ಗಂಟೆಗೆ ಹಿಂದೂ ಧರ್ಮಜಾಗೃತಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಸುಮಾರು ೫೦೦ ಧರ್ಮಾಭಿಮಾನಿಗಳು ಪಾಲ್ಗೊಂಡು ಧರ್ಮಾಭಿಮಾನವನ್ನು ಪ್ರದರ್ಶಿಸಿದರು.

ಈ ಸಭೆಯಲ್ಲಿ ಪೂಜ್ಯ ಸಿದ್ಧರಾಮ ಚೈತನ್ಯ ಮಹಾಸ್ವಾಮೀಜಿ (ಶ್ರೀ ಅರೆ ಶಂಕರ ಮಠ, ಕುಣಿಗಲ್), ಶ್ರೀ. ಎಚ್.ಎನ್. ನಟರಾಜ (ಕೇಂದ್ರ ಕಾರ್ಯದರ್ಶಿ, ಭಾ.ಜ.ಪ., ಕುಣಿಗಲ್), ಶ್ರೀ. ಕರುಣಾಕರ ಅಭ್ಯಂಕರ (ಹಿಂದೂ ಜನಜಾಗೃತಿ ಸಮಿತಿ), ಶ್ರೀ. ವಿನೋದ ಕಾಮತ (ಸನಾತನ ಸಂಸ್ಥೆ), ಶ್ರೀ. ಮೋಹನ ಗೌಡ (ಧರ್ಮಶಕ್ತಿ ಸೇನೆ) ಇವರು ಉಪಸ್ಥಿತರಿದ್ದರು.

ಆರಂಭದಲ್ಲಿ ಬೆಟ್ಟಳ್ಳಿ ಮಠದ ವೇದ ಪಾಠಶಾಲೆಯ ಶ್ರೀ. ಕುಮಾರಸ್ವಾಮಿ (ಗುರೂಜಿ), ಶ್ರೀ. ಬಸವರಾಜು, ಶ್ರೀ. ಲೊಕೇಶ, ಶ್ರೀ. ನವೀನ ಕುಮಾರರವರು ವೇದಮಂತ್ರಪಠಣ ಮಾಡಿದರು.

ನಂತರ ಪೂಜ್ಯ ಸಿದ್ಧರಾಮ ಚೈತನ್ಯ ಮಹಾಸ್ವಾಮೀಜಿಯವರ ಹಸ್ತದಿಂದ ದೀಪಪ್ರಜ್ವಲನೆಯನ್ನು ಮಾಡಲಾಯಿತು. ಪೂಜ್ಯ ಸ್ವಾಮೀಜಿಯವರ ಸತ್ಕಾರವನ್ನು ಸಮಿತಿಯ ಶ್ರೀ. ಮಂಜೇಶರವರು ಮಾಡಿದರು. ಹಿಂದೂ ಜನಜಾಗೃತಿ ಸಮಿತಿಯ ಕಾರ್ಯದ ವರದಿಯನ್ನು ಸಮಿತಿಯ ಸೌ. ದೀಪಾರವರು ಮಂಡಿಸಿದರು. ಕನ್ನಡ 'ಸಾಪ್ತಾಹಿಕ ಸನಾತನ ಪ್ರಭಾತ'ದ ಪ್ರತಿನಿಧಿ ಶ್ರೀ. ವಿಘ್ನೇಶರವರು 'ಸನಾತನ ಪ್ರಭಾತ'ದ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿದರು. ಕು. ಕವಿತಾ ಹಾಗೂ ಕು. ರಶ್ಮಿಯವರು ಈ ಸಭೆಯ ಸೂತ್ರಸಂಚಾಲನವನ್ನು ಮಾಡಿದರು. (೪ ನೇ ಪುಟಕ್ಕೆ)